**ಮಧುಗಿರಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ** Senior Civil Judge MADHUGIRI

**O.S No: 355/2023**

| ವಾದಿ: | ವಿರುದ್ಧ | ಪ್ರತಿವಾದಿ: |
|---|---|---|
| ಎಂ.ಸಿ.ಶ್ರೀನಿವಾಸ | | ದಲಿಪ್ ಸಿಂಗ್ |

**ವಾದಿ ಪರ ಸಾಕ್ಷಿದಾರರ ಮುಖ್ಯ ವಿಚಾರಣಾ ಪ್ರಮಾಣ ಪತ್ರ**

| | |
|---|---|
| ಸಾಕ್ಷಿದಾರರಹೆಸರು: | ಹೆಚ್.ಚಲಪತಿ, |
| ತಂದೆ ಹೆಸರು: | ಹನುಮಂತಪ್ಪ |
| ವಯಸ್ಸು: | 49 ವರ್ಷಗಳು |
| ಕೆಲಸ: | ವ್ಯವಸಾಯ |
| ವಾಸ: | ಸುದ್ದೇಕುಂಟೆ ಗ್ರಾಮ, ಕೊಡಿಗೇನಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು, |

ಈ ಮೇಲ್ಕಂಡ ಸಾಕ್ಷಿದಾರರಾದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಸತ್ಯವಾಗಿ ನುಡಿಯುವ ಸಾಕ್ಷ್ಯವೇನೆಂದರೆ,

ನಾನು ವಾದಿ ಹಾಗು ಪ್ರತಿವಾದಿಯನ್ನು ನೋಡಿರುತ್ತೇನೆ, ಪ್ರತಿವಾದಿಯು ದಿ: 01-09-2023 ರಂದು ವಾದಿಗೆ ದಾವಾ ಸ್ವತ್ತಿನ ಮಾರಟ ಮಾಡುವ ವಿಚಾರವಾಗಿ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ, ಪ್ರತಿವಾದಿಯ ಮಾಹಿತಿಯಂತೆ ಜಿಲ್ಲಾ ಪತ್ರಬರಹಗಾರರಾದ ಹೆಚ್.ಕೆ.ರಂಗನಾಥ್ ರವರು ನಿಗದಿತ ಸ್ಟಾಂಪ್ ಪೇಪರ್ ಮೇಲೆ ದಸ್ತಾವೇಜನ್ನು ತಯಾರು ಮಾಡಿದ ನಂತರ, ದಸ್ತಾವೇಜನ್ನು ವಾದಿ ಮತ್ತು ಪ್ರತಿವಾದಿಗೆ ಓದಿ ಹೇಳಿದ ನಂತರ ಪ್ರತಿವಾದಿಯು ಸದರಿ ಕ್ರಯದ ಕರಾರು ಪತ್ರಕ್ಕೆ ತಮ್ಮ ಸಹಿ ಮಾಡಿರುತ್ತಾರೆ, ನಂತರ ವಾದಿಯು ಕ್ರಯದ ಹಣವನ್ನು ಪಾವತಿಸಿದರು ನಂತರ ಸಾಕ್ಷಿ ಹನುಮಂತರೆಡ್ಡಿ ಹಾಗು ನಾನು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇವೆ ನಂತರ ಬಿಕ್ಕಲಂ ಆಗಿ ಪತ್ರ ಬರಹಗಾರರಾದ ಹೆಚ್.ಕೆ.ರಂಗನಾಥ್ ರವರು ತಮ್ಮ ಸಹಿ ಮತ್ತು ಮೊಹರನ್ನು ಹಾಕಿರುತ್ತಾರೆ. ನಾನು ಪ್ರತಿವಾದಿಯ ಸಹಿ ಮತ್ತು ನನ್ನ ಸಹಿಯನ್ನು ಪತ್ರ ನೋಡಿದಲ್ಲಿ ಗುರ್ತಿಸುತ್ತೇನೆ.

ಮೇಲ್ಕಂಡ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆಯೆಂದು ಪ್ರಮಾಣೀಕರಿಸಿ ನಾನು ಈ ಕೆಳಗೆ ಸಹಿ ಮಾಡಿರುತ್ತೇನೆ.

ನನ್ನ ಗುರುತು ಬಲ್ಲವರು

NOTARY
P.R. PANDURANGAPPA B.A., LLB., MADHUGIRI Revenue Taluk, Tumkur Dist. Reg. No. Law/LCL/ 103/2025 Expiry Date: 13-11-2027
GOVT. OF KARNATAKA

ವಕೀಲರು,
ಮಧುಗಿರಿ
ದಿನಾಂಕ: 17/7/24

ಪ್ರಮಾಣೀಕರಿಸುವವರ ಸಹಿ.

SWORN BEFORE ME
17/7/2024
P. R. PANDURANGAPPA
BA, LL.B
ADVOCATE & NOTARY
MADHUGIRI
KAR. No: 426 / 1993

No. OF CORRECTIONS Nil

ಓಎಸ್.355/2023
ಪಿ.ಡಬ್ಲ್ಯು-2

ದಿನಾಂಕಃ 10-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ- ವಾದಿ ಪರವಾಗಿಃ ಶ್ರೀ. ಹೆಚ್.ಆರ್. ವಕೀಲರಿಂದಃ-**

ಪ್ರತಿವಾದಿ ವಾದಿಗೆ ಬರೆದುಕೊಟ್ಟ ಕ್ರಯದ ಕರಾರು ಪತ್ರಕ್ಕೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇನೆ. ಆ ಕ್ರಯದ ಕರಾರು ಪತ್ರವನ್ನು ನಿಪಿ1 ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.1(ಇ) ಎಂದು ಗುರುತಿಸಲಾಯಿತು. ಅದಕ್ಕೆ ನನ್ನ ಜೊತೆ ಹನುಮಂತರೆಡ್ಡಿರವರು ಸಹಿ ಮಾಡಿರುತ್ತಾರೆ. ಆ ಕ್ರಯ ಕರಾರು ಪತ್ರವನ್ನು ರಂಗನಾಥ ಎಂಬುವವರು ಬರೆದು ಬಿಕ್ಲಾಂದಾರರಾಗಿ ಸಹಿ ಮಾಡಿರುತ್ತಾರೆ.

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ-**

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

10/8/2026

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ